

ಕೆ.ಎಸ್. ನಿಸಾರ್ ಅಹಮದ್ (ಫೆ. 5, 1936 – ಮೇ 3, 2020) ಕನ್ನಡ ಸಾಹಿತ್ಯಲೋಕದ ಸೌಗಂಧಿಕಾ ಪುಷ್ಪ. ಕುವೆಂಪು, ಬೇಂದ್ರೆ, ಪುತಿನ, ಅಡಿಗರ ನಂತರದ ಮಹತ್ವದ ಕವಿಗಳಲ್ಲೊಬ್ಬರಾದ ಅವರು, ಕಾವ್ಯವನ್ನು ಜೀವನಧರ್ಮದಂತೆ ಪಾಲಿಸಿದವರು ಹಾಗೂ ಅಂತರಂಗ ಬಹಿರಂಗಗಳ ಮಥನಕ್ಕೆ ಕಾವ್ಯವನ್ನೇ ಕಡೆಗೋಲನ್ನಾಗಿಸಿಕೊಂಡವರು. ನಿಸಾರ್ ಕಣ್ಮರೆಯೊಂದಿಗೆ, ಕನ್ನಡ ಕಾವ್ಯೋದ್ಯಾನದ ಒಂದು ಜಗಲಿ ಖಾಲಿಯಾಗಿದೆ. ಆದರೆ, ಆ ಉದ್ಯಾನದಲ್ಲಿ ಅವರು ನೆಟ್ಟು ಬೆಳೆಸಿದ ಗುಲ್‌ಮೊಹರ್ ಶಾಶ್ವತವಾಗಿ ನಮ್ಮೊಂದಿಗೆ ಉಳಿಯಲಿದೆ.

# ನಿಸಾರ್: ಕನ್ನಡ ಕಾವ್ಯೋದ್ಯಾನದ ಗುಲ್‌ಮೊಹರ್

■ ಎಸ್. ದಿವಾಕರ್

ಚಿತ್ರ/ಆನಂದ್ ಬಕ್ಷಿ

ಕೆ. ಎಸ್. ನಿಸಾರ್ ಅಹಮದ್ ಕನ್ನಡದ ಬಹುಮುಖ್ಯ ಕವಿಯಾಗುವುದಕ್ಕೆ ಎಷ್ಟೋ ವರ್ಷಗಳ ಮುಂಚೆಯೇ ಅಂಥ ಕವಿಯೊಬ್ಬನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ್ದರು ಎನ್ನಿಸುತ್ತದೆ. ಸಾಕಷ್ಟು ಎತ್ತರವಾಗಿದ್ದ, ತಾರುಣ್ಯದಲ್ಲಿ ಸುಂದರಾಂಗ ಎನಿಸುವಂತಿದ್ದ ಅವರು ತಮ್ಮ ಠಾಕುಠೀಕಾದ ಸೂಟಿನಿಂದ, ಆತ್ಮೀಯತೆಯನ್ನು ಸೂಸುವ ಮೆಲುಮಾತಿನಿಂದ ತಮ್ಮದೇ ನಿಚ್ಚಳವಾದೊಂದು ವರ್ತನಾಶೈಲಿಗೆ ಅಂಟಿಕೊಂಡಿದ್ದರು. ಅವರ ಮಾತುಗಳಲ್ಲಿ ಗಾಂಭೀರ್ಯವಿರುತ್ತಿತ್ತು, ತುಂಟತನವೂ ಇರುತ್ತಿತ್ತು. ಜೊತೆಗೆ ನಮ್ಮ ಮಧ್ಯಮ ವರ್ಗದ ನಗರವಾಸಿ ಸಂವೇದನೆಗೆ ಹತ್ತಿರವಾದ ನುಡಿಗಟ್ಟುಗಳೂ ವಿಶಿಷ್ಟ ಲಯಗಳೂ ಇರುತ್ತಿದ್ದವು. ಇವೆಲ್ಲವುಗಳಿಗಿಂತ ಮಿಗಿಲಾಗಿ ಸಮಾಜಜೀವಿಯಲ್ಲಿ ಇರಬೇಕಾದ ಒಳ್ಳೆಯತನಕ್ಕೆ ಹೆಸರಾಗಿದ್ದರು.

ತಾರುಣ್ಯದಲ್ಲಿರುವಾಗಲೇ ಅವರಲ್ಲಿದ್ದ ಕವಿ ವಿಕಾಸಗೊಳ್ಳತೊಡಗಿದ್ದ. ಅವರ ಮೊದಲ ಕವನಸಂಕಲನ ‘ಮನಸು ಗಾಂಧಿಬಜಾರು’ (1960) ಪ್ರಕಟವಾದದ್ದು ಅವರಿಗೆ ಇಪ್ಪತ್ತಾರು ತುಂಬಿದಾಗ. ಆ ಸಂಕಲನ ತನ್ನ ಶೀರ್ಷಿಕೆಯಿಂದಷ್ಟೇ ಹೊಸದಾಗಿರಲಿಲ್ಲ; ತನ್ನ ನುಡಿಗಟ್ಟು, ಪ್ರಾಸ, ಧ್ವನಿ, ಲಯ, ಹ್ರಸ್ವ ದೀರ್ಘ ಶಬ್ದಗಳು, ಸಂವೇದನೆ, ಮೊದಲಾದವುಗಳಿಂದಲೂ ಹೊಸದಾಗಿತ್ತು. ಆ ಕಾಲದ ಹಿರಿಯ ಕವಿಗಳೆಲ್ಲರೂ ಅವರನ್ನು ಮೆಚ್ಚಿಕೊಂಡರೆಂಬುದಕ್ಕೆ ಒಂದು ಉದಾಹರಣೆ ಕೊಡುವುದಾದರೆ ಅದು 1961ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಒಂದು ಕವಿಗೋಷ್ಠಿ. ಅದರಲ್ಲಿ ಜಿ.ಪಿ. ರಾಜರತ್ನಂ, ವಿ.ಸೀ., ಪು.ತಿ.ನ., ಕೆ.ಎಸ್.